4. ಚಡ ದರಖಾಸ್ತುದಾರನು ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25ರ ಮೇರಿಗೆ ಕೇವಣಿ ಇಡತಕ್ಕದ್ದಲ್ಲದೆ, ಬಾಕಿ ಮೊಬಲಗನ್ನು ಡಿಸ್ಟ್ರಿಕ್ಟ್ ಯಾ ತಾಲ್ಲೂಕು ಖಜಾನೆಯೊಳಗೆ ಮೂರು ಸಮನಾದ ಖಿಸ್ತುಗಳಾಗಿ ಅಂದರೆ 1885ನೇ ಇಸವಿ ಅಕ್ಟೋಬರ್, ನವಂಬರ್ ಮತ್ತು ಡಿಸಂಬರ್ ಮಾಹೆಗಳ ಗುರ್ತೇ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು.

5. ಇಜಾರೆದಾರನು ಯಾವದಾದರೂ ಖಿಸ್ತನ್ನು, ಆದು ಬಾಕಿ ಆದಾಗ, ಪಾವತಿಮಾಡಲಿಕ್ಕೆ ತಪ್ಪಿದರೆ, 1886ನೇ ಇಸವಿ ಮಾರ್ಚಿ 31ನೇ ಮಕ್ತುಂವರಿಗಿನ ಸುಲೆ ಪೈಕಿ ಉಳಿದ ಕಾಲದ ಪರಿಯಂತ ಸದರೀ ಪಸಾರೆಜಿನಸುಗಳನ್ನು ಜಮಾಯಿಸುವ ಹಕ್ಕುದಾರಿಯು ಫಾರೆಸ್ಟು ಇಲಾಖೆಯಿಂದ ಮರಳಿ ಹರಾಜು ಹಾಕಲ್ಪಟ್ಟು, ಅವಮಾನೀಯಲ್ಲಿ ಕೆಲಸ ನಡಿಸಲ್ಪಡುವದು. ಪರಂತು ಖಿಸ್ತು ಪಾವತಿ ಮಾಡಲಿಕ್ಕೆ ತಪ್ಪಿದ ಇಜಾರೆದಾರನು ಅದರಿಂದ ಸಂಭವಿಸುವ ಲುಕ್ಸಾನಿಗೆ ಗುರಿಯಾಗತಕ್ಕದ್ದು.

6. ಇಜಾರೆಮಾಡಿಕೊಳ್ಳಲು ಅಪೇಕ್ಷಿಸುವ ಜನಗಳಿಗೆ ಯಾವದಾದರೂ ಸಂಗತಿಗಳು ತಿಳಿಯಬೇಕಾಗಿದ್ದರೆ, ಅವರು ಹರಾಜ್ ತಾರೀಖಿಗೆ ಮದಲು ಸೂಪರ್‌ಟೆಂಡೆಂಟರ ಆಫೀಸಿನೊಳಗೆ ರೂಬರೂ ಕೇಳಿದಲ್ಲಿ, ಫಾರೆಸ್ಟು ಸೂಪರ್‌ಟೆಂಡೆಂಟರು ತಿಳಿಸುವರು.

ಶಿ. ಇ. ಯಂ. ರನಲ್, ಎಂ. ಆರ್. ಸಿ.,
ಫಾರೆಸ್ಟ್ ವ ಗವರ್ನ್‌ಮೆಂಟ್ ಫಾರಂಗಳ ಸೂಪರ್‌ಟೆಂಡೆಂಟ್.

ನಂ 2. ತಾರೀಖು 24ನೇ ಏಪ್ರಿಲ್ 1885.

ಹೆಗ್ಗಡದೇವನಕೋಟೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸುವ ದಸ್ತೈವಜನ್ನ ಕ್ರಮವಾದ ವಾರನದಾರನಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿ ಕೊಂಡವನ ಹೆಸರು ಮತ್ತು ವಾಸಸ್ಥಳ	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತ್ತು.
81	ಹೆಗ್ಗಡದೇವನಕೋಟೆ ತಾಲ್ಲೂಕು ಮಟ್ಟಿಕೆರೆಲಿರುವ ತೆಲಗುಬಣಜಿಗರ ಜಾತಿನೂಳೇರ ತಿಮ್ಮನ ಮಗ ವೆಂಕಟರಮಣ.	ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರಿನಲ್ಲಿ ಇರುವ ತೆಲಗುಬಣಜಿಗರ ಜಾತಿ ಕಾಳಮ್ಮನ ಮಗ ಪೋಲಿಸ್‌ಜವಾನ ವೆಂಕಟರಾಮಯ್ಯ	12—1—83	12—1—83	(50) ರೂಪಾಯಿನ ಜಮ್ರ್ಮಾ ಕ್ರಯ ಪತ್ರ.
82—83					

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 17ನೇ ಏಪ್ರಿಲ್ 1885.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟುಗಳ ಉತ್ಪತ್ತೀ ಬಾಬತು ಇದರಡಿ ಕಂಡ ನಾಟಾಗಳು ಫಾರೆಸ್ಟು ಅಸಿಸ್ಟೆಂಟ್ ಕಂಜರ್‌ವೇಟರವರಿಂದ ಈ ಕೆಳಗೆ ನಮೂದಾದ ಸ್ಥಳಗಳಲ್ಲೂ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ಹರಾಜು ನಡಿಯತಕ್ಕ ಸ್ಥಳ.	ಹರಾಜು ತಾರೀಖು.	ತೇಗದ ನಾಟುಗಳು.	ಕಾಡಜಾತಿ ನಾಟುಗಳು.	ತೇಗ ಮತ್ತು ಕಾಡುಮರದ ಪೊಲ್ಗಳು.	ಜುಮ್ಲೆ.
ಲಕ್ಕುವಳ್ಳಿ ..	26ನೇ ಮೇ 1885	1,000	500	100	1,600
ಕಣಬೂರು ..	1ನೇ ಜೂ॥ ಡಿಟೋ	600	400	0	1,000
ಆಯನೂರು .	6ನೇ ಜೂ॥ ಡಿಟೋ	50	150	250	450
ಶಿವಮೊಗ್ಗ ..	10ನೇ ಜೂ॥ ಡಿಟೋ	200	300	350	850

ಹರಾಜಿನ ಷರತ್ತುಗಳು—ಮೈಸೂರು ಗೆಜೆಟ್ಟಿನಲ್ಲಿ ಛಾಯಿಷ್ ಮಾಡಲ್ಪಟ್ಟ 1873ನೇ ಇಸವಿ ಜೂ॥ 12ನೇ ಮಕ್ಕೂಂ 20ನೆ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕಂಡ ಪ್ರಕಾರ ಇರತಕ್ಕವು, ಮತ್ತು ಹರಾಜು ಕಾಲದಲ್ಲಿ ಓದಲ್ಪಡುವವು.

ಆ. ಪಿ. ಲವ್‌ರೀ,
ಫಾರೆಸ್ಟ್ ಅಂಡ್ ಕನ್‌ಸರ್‌ವೇಟರ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 28ನೇ ಏಪ್ರಿಲ್ 1885.

ಸ್ಯ॥ 1884ನೇ ಇಸವಿ ಜೂ॥ 30ನೇ ಮಕ್ಕೂಂ 1946—44ನೇ ನಂಬರ್‌ವುಳ್ಳ ದಿವಾನರವರ ಪ್ರೊಸಿಡಿಂಗ್ಸ್‌ನಲ್ಲಿ ಕಂಡ ನಿಯಮಗಳ್ಳನುಸರಿಸಿ ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಐಯಿಂದ ವಿಶೇಷತಃ ಹಾಂಗೆ ನಡಿಸುವದಕ್ಕೆ ಆಪ್ಪಣಿ ಪಡವದವರು ಏನಾಯಿ ಬಾಳ ತಮಾಂ ಜನಗಳೂ ಯದರಡಿ ಪರಿಶೀಲ್ ಕಾಣಿಸಲ್ಪಟ್ಟ ಯಾವದಾದರೊಂದು ಜ್ಞಾತಿ ಅಲ್ಲದ ಇತರ ಯಾವ ಮರವನ್ನೆ ಆಗಲಿ ಯಾವ ನೆಪದಮೇಲೂ ಕತ್ತರಿಸ ಕೂಡದೆಂತಲೂ, ಊನು ಪಡಿಸ ಕೂಡದೆಂತಲೂ ಖಂಡಿತವಾಗಿ ನಿರೋಧಿಸಲ್ಪಟ್ಟಿರುತ್ತಾರೆ.

2. ಈ ನಿಬಂಧನೆಯ ಉಲ್ಲಂಘನೆಯು ಜಾರಿಯಲ್ಲಿರತಕ್ಕ ಫಾರೆಸ್ಟು ರೂಲ್ಸ್‌ನಿಂದ ವಿಧಿಸಲ್ಪಟ್ಟ ರೀತಿಯಾಗಿ ಅಮಲ್ ಚಲಾಯಿಸಲ್ಪಡುವದು.

3. ಮರ ಕತ್ತರಿಸಲ್ಪಡಬೇಕಾದ ಜಂಗಲಿ ಪ್ರದೇಶಗಳು ತಾಲ್ಲೂಕು ಅಧಿಕಾರಿಗಳಿಂದ ನಿಶ್ಚಯಿಸಲ್ಪಟ್ಟು ತಾಲ್ಲೂಕಾವುಳಿ ಕ್ರಮವಾಗಿ ಛಾಯಿಷ್ ಮಾಡಲ್ಪಟ್ಟಿರುತ್ತೆ:—

ತರೀಕೆರೆ ತಾಲ್ಲೂಕು.

1 ತೂಗಲ್ ಮರ | 2 ಕೆಟ್ಟುಹೋದ ಯಾ ನಾಕಾರೀ ಬಿದರು | 3 ದಿಂಡಗದ ಮರ

(ಫಕ್ತು) ಕೊಪ್ಪಾ ತಾಲ್ಲೂಕು.

1 ರಂಜದ ಮರ | 2 ನೇರಳೇ ಮರ |

ಯಡೇಹಳ್ಳಿ ಡಿಪ್ಯುಟಿ ಅಮಲ್‌ದಾರ್ರ ಜಾರ್ಜಿನಲ್ಲಿ.

1 ಹುನಾಲಮರ 2 ನೇರಳೆ | 36 ರಂಜದ ಮರ | 4 ನೆಲ್ಲೀಮರ

ಚಿಕ್ಕಮಗಳೂರು ತಾಲ್ಲೂಕು.

1 ಕಲಸಡ್ಡಿ	6 ದಿಂಡಗ	11 ಮಂಡಗಳ್ಳಿ
2 ಕಕ್ಕೆ	7 ಕಾಡಪಂಡೆ	12 ನೇರಳೆ (ನಾಟುಕ್ಕೆ ಲಾಯಖಿಲ್ಲದ್ದು)
3 ಕಾರೆ	8 ಕಲ್‌ಮಾವು	13 ನೀರ ನಳ್ಳಿ
4 ಉಡತಗರೆ	9 ಪಿಸಿಗೆ	14 ಹುರಿ ಅಕ್ಕಿ
5 ನೆಲ್ಲಿ	10 ತಾರೆ	15 ಹಂಗರ